**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿತ್ತಾಪೂರ</u>**

**<u>ಸಿ.ಸಿ.ನಂ. 295/2017</u>**

ಸರಕಾರದ ಪರವಾಗಿಃ ಕಾಳಗಿ ಪೋ.ಠಾ.,

-:ವಿರುದ್ದ:-

ಆರೋಪಿ/ತರುಃ- ಮಂಜುನಾಥ ಮತ್ತು ಇತರರು

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ2: ಪ್ರಾಸಾ-1 ಶರಣಪ್ಪಾ ಕುಂಬಾರ ಪ್ರಭಾರಿ ಪಿಡಿಓ ನರೋಣಾ ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿ: 29-04-2017 ರಂದು ಆ ದಿನ ಶನಿವಾರ ಆಗಿದ್ದು, ಸದರಿ ದಿನ ಬಸವ ಜಯಂತಿ ಇದ್ದು, ತಾವು ಬಸವ ಜಯಂತಿ ಆಚರಣೆ ಮಾಡಿ, ತಾಲೂಕು ಪಂಚಾಯತಿ, ಚಿತ್ತಾಪೂರಕ್ಕೆ ಬರಬೇಕೆಂದು ತಮ್ಮ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶ ಮಾಡಿದ್ದರಿಂದ ಆ ದಿನ ತಮ್ಮ ಗ್ರಾಮ ಪಂಚಾಯತಿಯಲ್ಲಿ, ಗ್ರಾಮ ಪಂಚಾಯತಿ ಸದಸ್ಯರು, ಅಧ್ಯಕ್ಷರು ಹಾಗೂ ಗ್ರಾಮಪಂಚಾಯತಿ ಸಿಬ್ಬಂದಿಗಳು ಬಸವ ಜಯಂತಿ ಆಚರಣೆ ಮಾಡಿ, ಲಘು ಉಪಹಾರವನ್ನು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಮಾಡಿರುತ್ತೆವೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ3: ಪ್ರಾಸಾ-1 ರವರು ಮುದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ನಂತರ ತಮ್ಮ ಮೇಲಾಧಿಕಾರಿಗಳ ಆದೇಶದ ಎಂಜಿಎನ ಆರ್‌ಜಿಎ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎನಎಂಆರ ಶೀಟ ತೆಗೆಯಲು ಚಿತ್ತಾಪೂರಕ್ಕೆ ಬರಲು ಹೊರಟೆನೆಂದು, ಆಗ 1ನೇ ಆರೋಪಿಯು ತನ್ನನ್ನು ಅಡ್ಡಗಟ್ಟಿ ಬಸವಜಯಂತಿಯ ಆಚರಣೆ ಮಾಡಲು ತನಗೆ ಹಣ ನೀಡಬೇಕೆಂದು ಕೇಳಿದನೆಂದು, ನಂತರ ಒತ್ತಾಯ ಮಾಡಿ ತನ್ನನ್ನು ಗ್ರಾಮ ಪಂಚಾಯತಿಯ ಒಳಗೆ ಕೂಡಿಹಾಕಿದ್ದರೆಂದು, ತಾನು ಆತನನ್ನು ಕುರಿತು ಎಸಿಎಸ್ಟಿ ಜನರಿಗೆ ಹಣ ನೀಡಲು ತನಗೆ ಅವಕಾಶ

ಇದ್ದು, ಅದೇ ರೀತಿ ಫೆಬ್ರವರಿ-2017 ರಂದು ತಮ್ಮ ಗ್ರಾಮ ಪಂಚಾಯತಿಯಲ್ಲಿ ಲೆಕ್ಕ ಪರಿಶೋಧನೆ ಆಗಿದ್ದು, 1 ನೇ ಆರೋಪಿಯು ತನ್ನನ್ನು ಕುರಿತು, ಜಾತಿವಾದಿ ಇದ್ದು, ಕೇವಲ ಎಸಿಎಸ್ಟಿ ಜನರಿಗೆ ಮಾತ್ರ ಹಣ ಸಹಾಯ ಮಾಡುತಿಯಾ ಎಂಬಿತ್ಯಾದಿಯಾಗಿ ಬೈದು, ಅವಾಚ್ಯ ಶಬ್ದಗಳಿಂದ ನಿಂದಿಸಿ, ತನಗೆ ಹೊಡೆಯಲು ಬಂದಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ4: ಪ್ರಾಸಾ-1 ರವರು ಮುದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಆಗ ತಮ್ಮ ಸಿಬ್ಬಂದಿ ಚಾಸಾ: 09 ಮತ್ತು 11 ರವರು ಬಂದು ತನ್ನನ್ನು ಅಲ್ಲಿಂದ ಹೊರಗೆ ತಂದು ತನ್ನನ್ನು ರಕ್ಷಿಸಿದ್ದಾರೆಂದು, ನಂತರ 1ನೇ ಆರೋಪಿ ಹಾಗೂ ನ್ಯಾಯಾಲಯದ ಮುಂದೆ ಇರುವ ಇಬ್ಬರು ಆರೋಪಿಗಳು ತನ್ನ ಮೊಬೈಲನ್ನು ಕಸಿದುಕೊಂಡು, ತನ್ನನ್ನು ಕುರಿತು ತನ್ನ ಅಂಗಿ ಪ್ಯಾಂಟ ಬಿಚ್ಚಿ, ಮೆಟ್ಟು ಕಟ್ಟಿ ಊರದಲ್ಲಿ ಮೆರೆಸಬೇಕು ಎಂದು ತನಗೆ ಬೈದಿರುತ್ತಾರೆಂದು ಆ ದಿನ ಸಮಯ 12.00 ಗಂಟೆಯಾದಾಗ, ಚಾಸ: 11 ರವರು ಪೊಲೀಸ್ ಠಾಣೆಗೆ ಕರೆ ಮಾಡಿದ, ಪಿಎಸ್ಐ, ಕಾಳಗಿ ಠಾಣೆಯವರು ಬಂದು, ತನ್ನ ಮೊಬೈಲನ್ನು ತನಗೆ ಆರೋಪಿಗಳಿಂದ ವಾಪಸ್ ಪಡೆದುಕೊಂಡು ತನಗೆ ನೀಡಿರುತ್ತಾರೆ, ನಂತರ ತಾನು ಜಿಲ್ಲಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಭೇಟಿಯಾಗಿ, ಸದರಿಯವರ ನಿರ್ದೇಶನದ ಪ್ರಕಾರ ದಿ: 01-05-2017 ರಂದು ಆರೋಪಿಗಳ ವಿರುದ್ಧ ಒಂದು ದೂರನ್ನು ನೀಡುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ5: ಪ್ರಾಸಾ-2 ಮಲ್ಲಿನಾಥ ತಂದೆ ಚಂದ್ರಾಮ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿ: 29-04-2017 ರಂದು ಬೆಳಿಗ್ಗೆ 09.30 ಗಂಟೆ ಸಮಯದಲ್ಲಿ ಬಸವ ಜಯಂತಿ ಆಚರಣೆ ಮುಗಿದಿದ್ದು, ನಂತರ ಎರಡು ದಿನಗಳ ನಂತರ ಚಾಸಾ: 13 ರವರು ಮಧ್ಯಾಹ್ನ 02.00 ಗಂಟೆಗೆ ತಮ್ಮ ಗ್ರಾಮಕ್ಕೆ ಬಂದು, ಚಾಸಾ: 11 ರವರು ತೋರಿಸಿದ ಜಾಗದಲ್ಲಿ ತನ್ನ ಸಮಕ್ಷಮ ಒಂದು ಪಂಚನಾಮ ಕ್ರಮವನ್ನು ಜರುಗಿಸಿದ್ದಾರೆಂದು, ಬಸವೇಶ್ವರ ಜಯಂತಿಯ ದಿನದಂದು ಜಯಂತಿ ಮಾಡಲು ಅನುದಾನದ (ಸಹಾಯ ಧನ) ಸಂಬಂಧ ಗಲಾಟೆ ಆಗಿದ್ದರ ಬಗ್ಗೆ ಸದರಿ ದಿನ

ಪೊಲೀಸ್ ತನ್ನ ಸಮಕ್ಷಮ ಘಟನೆ ಸ್ಥಳದ ಪಂಚನಾಮ ಕ್ರಮವನ್ನು ಜರುಗಿಸಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ6: ಪ್ರಾಸಾ-11 ಚಂದ್ರಕಾಂತ ಪಿ.ಎಸ.ಐ. ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ: 02-05-2017ರಂದು ಚಾಸಾ-12ರವರಿಂದ ಕಡತ ಪಡೆದು ಮುಂದಿನ ತನಿಖೆಯನ್ನು ಮಾಡುತ್ತೇನೆಂದು, ಅದೇ ದಿನ ಗುನ್ನೆ ಸ್ಥಳದ ಪಂಚನಾಮವನ್ನು ಚಾಸಾ-2 ಮತ್ತು 3ರವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆ ಸಮಯದಲ್ಲಿ ಜರುಗಿಸಿರುತ್ತೇನೆಂದು, ಅದೇ ದಿನ ಚಾಸಾ-4 ರಿಂದ 11 ರವರ ಹೇಳಿಕೆಗಳನ್ನು ಪಡೆದಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ7: ಪ್ರಾಸಾ-11 ರವರು ಮುದುವರೆದು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ಅದೇ ದಿನ 3ನೇ ಆರೋಪಿತನನ್ನು ದಸ್ತಗಿರಿ ನಿಯಮ ಪಾಲಿಸಿ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆಂದು, ದಿನಾಂಕ: 31-05-2017 ರಂದು 1 ಮತ್ತು 2 ನೇ ಆರೋಪಿತರು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಆತನ ದಸ್ತಗಿರಿ ನಿಯಮ ಪಾಲಿಸಿ ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡುತ್ತೇನೆಂದು, ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಸಿಕ್ಕ ಕಾರಣ ಅಂತಿಮ ವರದಿಯನ್ನು ಸಲ್ಲಿಸುತ್ತೇನೆಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-8 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-9 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 16.02.2026

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಳು ಚಿತ್ತಾಪೂರ.**